# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 93, ವಸಂತನಗರ

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:16-07-2022 ರಂದು ಶನಿವಾರ ಮಧ್ಯಾಹ್ನ 3.00 ಗಂಟೆಗೆ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್ (ಚುನಾವಣೆ) ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:93 ಬಿಬಿಎಂಪಿ ಸಭೆಯನ್ನು ನಡೆಸಿಕೊಟ್ಟರು.

ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು.

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೋಬೆಲ್ ಸಂಖ್ಯೆ |
|---|---|---|---|
| 1 | ಶ್ರೀಮತಿ.ಮಂಜುಳಮ್ಮ | ನೋಡಲ್ ಆಧಿಕಾರಿಗಳು | |
| 2 | ಶ್ರೀ.ಪ್ರಕಾಶ್ ನೆಡುಂಗಾಡಿ | ಎಎಪಿ ವಾರ್ಡ್ 93 ಉಸ್ತುವಾರಿ | |
| 3 | ಭಾನುಪ್ರಕಾಶ್ | ಸಮಿತಿ ಸದಸ್ಯರು | |
| 4 | ಶ್ರೀ.ಧರ್ಮರಾಜ ಜಿ ನಾಯಕ್ | ಸಹಾಯಕ ಅಭಿಯಂತರರು | |
| 5 | ಶ್ರೀ.ಜಯರಾಜು | ಕೆಲಸ ಪರಿವೀಕ್ಷಕರು | |
| 6 | ಶ್ರೀ.ಮೂರ್ತಿ | ಕಂದಾಯ ವಸೂಲಿಗಾರರು | |
| 7 | ಶ್ರೀ.ಮನೋಜ್‌ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 8 | ಶ್ರೀ.ಶರತ್‌ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 9 | ಕುಮಾರಿ ರೇಣಕಾಂಬ | ಹಿರಿಯ ಆರೋಗ್ಯ ಪರಿವೀಕ್ಷಕರು | |
| 10 | ಶ್ರೀ.ಕೀರ್ತಿ ಎ.ಎಸ್. | ವಾರ್ಡ್ ಮಾರ್ಷಲ್ | |

## ಗೈರು ಹಾಜರಾದ ಸದಸ್ಯರು ಮತ್ತು ಅಧಿಕಾರಿಗಳು

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೋಬೆಲ್ ಸಂಖ್ಯೆ |
|---|---|---|---|
| 1 | ಶ್ರೀ.ಲಕ್ಷ್ಮೀಶ (ಲಚ್ಚಿ) | ಸದಸ್ಯರು | |
| 2 | ಶ್ರೀ.ಎಂ.ಎಸ್. ನಂಜುಡಮೂರ್ತಿ | ಸಾರ್ವಜನಿಕರು | |
| 3 | ಶ್ರೀ.ವೈಭವ್ ಆರ್.ಸಿ | ಸಂಯೋಜಕರು ವಾರ್ಡ್ 93 | |
| 4 | ಶ್ರೀ.ಅಜೇಯ್‌ಕುಮಾರ್ | ಸದಸ್ಯರು | |
| 5 | ಶ್ರೀ. ರಾಜ್ ದುಗ್ಗಾರ್ | ಸದಸ್ಯರು | |
| 6 | ಶ್ರೀ.ಮಾಧವನ್ | ಸದಸ್ಯರು | |
| 7 | ಶ್ರೀ.ರವೀಂದ್ರನಾಥ | ಸದಸ್ಯರು | |
| 8 | ಶ್ರೀಮತಿ.ಲಕ್ಷ್ಮಿದೇವಿ ಆನಂದ | ಸದಸ್ಯರು | |
| 11 | ಶ್ರೀಮತಿ.ಜಿ.ಕೆ.ವತ್ಸಲ | ಸದಸ್ಯರು | |
| 12 | ಶ್ರೀಮತಿ. ರಾಧಮ್ಮ | ಸದಸ್ಯರು | |

Scanned with CamSca

| | | | |
|---|---|---|---|
| 13 | ಶ್ರೀ.ಬಿ.ವಿ ಸುರೇಶ್ | ಸದಸ್ಯರು | |
| 14 | ಶ್ರೀ.ಪ್ರಕಾಶ್‌ಚಂದ್ರ | ಸದಸ್ಯರು | |
| 15 | ಶ್ರೀಮತಿ.ಪ್ರಿಯಾಚೆಟ್ಟಿ | ಸದಸ್ಯರು | |
| 16 | ಶ್ರೀ.ಸುನಿಲ್‌ಕುಮಾರ್ | ಸದಸ್ಯರು | |
| 17 | ಶ್ರೀ. ಸಂದೀಪ್ ಸಿಂಗ್ | ಬೀದಿ ದೀಪ ನಿರ್ವಹಣೆ ಬೆಸ್ಕಾಂ | |
| 18 | ಡಾ॥ ಸೈಯದ್ ಇಸ್ಮಾಯಿಲ್ | ಆರೋಗ್ಯ ವೈದ್ಯಾಧಿಕಾರಿಗಳು | |
| 19 | ಶ್ರೀ.ಗೋವಿಂದಗೌಡ | ತೋಟಗಾರಿಕೆ ಇಲಾಖೆ | |
| 20 | ಶ್ರೀ. ಮಹಮದ್ ಜಾವೇದ್.ಎ.ಎಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 21 | ಶ್ರೀ.ಕೋದಂಡರಡ್ಡಿ | ಸಹಾಯಕ ಅಭಿಯಂತರರು ಸ್ಮಾರ್ಟ್ ಸಿಟಿ | |
| 22 | ಶ್ರೀ.ನವೀನ್‌ಕುಮಾರ | ವೈದ್ಯಾಧಿಕಾರಿ ಶಿವಾಜಿನಗರ | |
| 23 | ಶ್ರೀ.ನಬಿ | ಆರಕ್ಷಕ ಉಪ ನೀರಿಕ್ಷಕರು | |
| 24 | ಶ್ರೀ.ದುರ್ಗಾಪ್ರಸಾದ್ | ಸಹಾಯಕ ಅಭಿಯಂತರರು ವಿದ್ಯುತ್ ಇಲಾಖೆ ಬೀದಿ ನಿರ್ವಹಣೆ | |
| 25 | ಶ್ರೀ.ಮಹೇಶ್‌ಕುಮಾರ್ | ಸಹಾಯಕ ಅಭಿಯಂತರರು ಃಘಋಋ | |
| 26 | ಶ್ರೀಮತಿ.ವೀಣಾ | ಸಹಾಯಕ ಕಂದಾಯ ಅಧಿಕಾರಿ | |

**ದಿನಾಂಕ:16-07-2022 ರಂದು ಶನಿವಾರ ಬೆಳಿಗ್ಗೆ 3.00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗೆಳು**

1) ಶ್ರೀಮತಿ. ಮಂಜುಳಮ್ಮ ನೋಡಲ್ ಆಧಿಕಾರಿಗಳು ಸಮಿತಿ ಸಭೆಯ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಗೆ ಮಂಡಿಸಿದರು.

2) ಸಭೆಯ ನಡಾವಳಿಗಳು ಹಾಗೂ ತೆಗೆದುಕೊಂಡು ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು. ಹಾಗೂ ಇಂದಿನ ಸಭೆಯಲ್ಲಿ ಚರ್ಚಿಸುವ ಸಂಬಂಧ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಲಾಯಿತು.

3) ಶ್ರೀ. ಪ್ರಕಾಶ ನೆಡುಂಗಾಡಿ ರವರು ಸಲ್ಲಿಸಿರುವ 15 ಅಂಶಗಳ ಪಟ್ಟಿಯನ್ನು ಸಮಿತಿಯಲ್ಲಿ ಪರಿಶೀಲಿಸಲಾಗಿ, ಕ್ರಮ ಸಂಖ್ಯೆ (2) ಮತ್ತು (3) ಕ್ಕೆ ಸಂಬಧಿಸಿದಂತೆ ಬೃಹತ್ ನೀರುಗಾಲುವೆ ಇಲಾಖೆಯಿಂದ ಕೈಗೊಳ್ಳಲು ಸೂಚಿಸಲಾಗಿದೆ. ರೆಲ್ವೆ ಸಮಾನಾಂತರ ರಸ್ತೆಯ ಕಾಮಗಾರಿಯು ತುಂಬಾ ನಿಧಾನಗತಿಯಲ್ಲಿ ನಡೆಯುತ್ತಿರುವುದರ ಬಗ್ಗೆ ಈಗಾಗಲೇ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರೊಂದಿಗೆ ಚರ್ಚಿಸಲಾಗಿದ್ದು, ಒಂದು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದಾಗಿ ತಿಳಿಸಿರುತ್ತಾರೆ. ಕ್ರಮ ಸಂಖ್ಯೆ (6) ಕ್ಕೆ ಸಂಬಂಧಿಸಿದಂತೆ ವಾಹನ ನಿಲುಗಡೆ ಬಗ್ಗೆ ಈಗಾಗಲೇ ಸಂಚಾರಿ ಪೊಲೀಸ್ ಇಲಾಖೆಗೆ ಸೂಚಿಸಲಾಗಿದ್ದು, ಮತ್ತು ಲಿಖಿತ ಮೂಲಕ ಪತ್ರ ಬರೆಯಲು ನೋಡೆಲ್ ಅಧಿಕಾರಿಗಳು ಸಮ್ಮತಿಸಿರುತ್ತಾರೆ. ವಸಂತನಗರ 1ನೇ ಮುಖ್ಯರಸ್ತೆಯಲ್ಲಿನ ಆಟದ ಮೈದಾನ ಅಭಿವೃದ್ಧಿ ಕಾಮಗಾರಿಯನ್ನು ಮಾನ್ಯ ಶಾಸಕರ ಅನುದಾನದಲ್ಲಿ ಕೈಗೆತ್ತಿಕೊಳ್ಳುವುದಾಗಿ ಜನಸ್ಪಂದನ ಸಭೆಯಲ್ಲಿ ತಿಳಿಸಿರುತ್ತಾರೆ. ಕ್ರಮ ಸಂಖ್ಯೆ (8) ರಂತೆ ವಸಂತನಗರದಲ್ಲಿ ಡಯಾಲಿಸಿಸ್ ಕೇಂದ್ರವನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಲು ಮಾನ್ಯ ವಲಯ ಆಯುಕ್ತರವರೊಂದಿಗೆ ಚರ್ಚಿಸಿ, ನುರಿತ ಆರೋಗ್ಯ ಸಿಬ್ಬಂದಿಯನ್ನು ಹೊಂದಿರುವ ಬೋರಿಂಗ್ ಆಸ್ಪತ್ರೆಯ ಸಹಯೋಗದೊಂದಿಗೆ ಪ್ರಾರಂಭಿಸಲು ಕ್ರಮಕೈಗೊಳ್ಳುವುದಾಗಿ ಮಾನ್ಯ ಶಾಸಕರು

Scanned with CamScanner

ಜನಸ್ಪಂದನ ಸಭೆಯಲ್ಲಿ ಚರ್ಚಿಸಿರುತ್ತಾರೆ. ಸಾರ್ವಜನಿಕ ಗ್ರಂಥಾಲಯವನ್ನು ನವೀಕರಿಸಲು ಶಿಕ್ಷಣ ಕೋಶದಿಂದ ಕೈಗೆತ್ತಿಕೊಳ್ಳಲು ಸೂಚಿಸಲಾಗಿರುತ್ತದೆ. ಕ್ರಮ ಸಂಖ್ಯೆ (10) ರಂತೆ ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ ಕ್ಯಾಮರಗಳನ್ನು ಅಳವಡಿಸಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಶ್ರೀಘ್ರದಲ್ಲಿಯೇ ಕಾರ್ಯರೂಪಕ್ಕೆ ತರಲಾಗುವುದು ಎಂದು ವಾರ್ಡ್ ಇಂಜಿನಿಯರ್ ತಿಳಿಸಿದರು. ಸಾರ್ವಜನಿಕ ಶೌಚಾಲಯಗಳ ಬಗ್ಗೆ ಈಗಾಗಲೇ ಶಿವಾಜಿನಗರ ವಿಧಾನ ಸಭಾಕ್ಷೇತ್ರದಲ್ಲಿ 30 ಶೌಚಾಲಯಗಳನ್ನು ನಿರ್ಮಿಸಲು ಪ್ರಸ್ತಾವಣೆ ಸಲ್ಲಿಸಲಾಗಿದೆ. ಕ್ರಮ ಸಂಖ್ಯೆ (11) ರಂತೆ ತುಂಗಭದ್ರಾ ಕಾಲೋನಿಯ ಶೌಚಾಲಯಗಳನ್ನು ಈಗಾಗಲೇ ದುರಸ್ಥಿ ಮಾಡಲಾಗಿರುತ್ತದೆ.

2022–23ನೇ ಸಾಲಿನ ರೂ.330.00 ಲಕ್ಷಗಳ ಅನುದಾನ ಲಭ್ಯವಿದ್ದು ಈಗಾಗಲೇ ಕ್ರೀಯಾಯೋಜನೆ ತಯಾರಿಸಿ ಉನ್ನತ ಅಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ವಾರ್ಡ್‌ನಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಿಲಾಗಿದ್ದು, ಈ ಬಗ್ಗೆ ಸುಮಾರು 50 ಕೆ.ಜಿ ಪ್ಲಾಸ್ಟಿಕನ್ನು ದಸ್ತಗಿರಿಮಾಡಿ ಸುಮಾರು ರೂ. 10000/– (ಹತ್ತು ಸಾವಿರ) ಗಳನ್ನು ದಂಡ ವಿಧಿಸಲಾಗಿದೆ.

4) ಸಮಿತಿ ಸದಸ್ಯರಾದ ಭಾನುಪ್ರಕಾಶ ರವರು ಮಾತನಾಡಿ ರೇಸ್‌ಕೋರ್ಸ್ ರಸ್ತೆಯ ಕುದುರೆ ವೃತ್ತದ ಹತ್ತಿರ ದೊಡ್ಡ ಗಾತ್ರದ ಗುಂಡಿ ಬಿದ್ದಿದ್ದು ಈ ಬಗ್ಗೆ ರಸ್ತೆ ಮೂಲ ಸೌಕರ್ಯ ಇಲಾಖೆಗೆ ತಿಳಿಸಲಾಗಿರುತ್ತದೆ. ಮತ್ತು ಚಕ್ರವರ್ತಿ ಬಡವಣೆಯ 3ನೇ ಅಡ್ಡರಸ್ತೆಯಲ್ಲಿನ ಗುಂಡಿಯನ್ನು ಸಹ ಮುಚ್ಚಲು ಕ್ರಮ ಕೈಗೊಳ್ಳುವುದಾಗಿ ವಾರ್ಡ್ ಇಂಜಿನಿಯರವರು ತಿಳಸಿದರು.

5) ಸಭೆಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳು ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮಕೈಗೊಳ್ಳಲು ಆದೇಶಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು

**ಸಹಿ/–**
ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್–93, ವಸಂತನಗರ
ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್–93, ವಸಂತನಗರ
ಬಿ.ಬಿ.ಎಂ.ಪಿ

Scanned with CamScanner